ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 567

ಸದಸ್ಯರ ಹೆಸರು : ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 11-12-2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯ ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಹುದ್ದೆಗಳ ನೇಮಕಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ;	ಬೀದರ್ ಜಿಲ್ಲೆಯ ಸಾರಿಗೆ ಇಲಾಖೆಯಲ್ಲಿ ವಿವಿಧ ವೃಂದದ ಒಟ್ಟು 34 ಹುದ್ದೆಗಳು ಖಾಲಿ ಇರುತ್ತವೆ. ಖಾಲಿ ಹುದ್ದೆಗಳ ಪೈಕಿ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಬಗ್ಗೆ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 03 ಬಿಇಎಂ 2020, ದಿನಾಂಕ:06-07-2020 ರಲ್ಲಿ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿರುತ್ತದೆ. ಅಲ್ಲದೆ, ಮುಂಬಡ್ತಿಗೆ ಮೀಸಲಿರುವ ಖಾಲಿ ಹುದ್ದೆಗಳನ್ನು ಹಂತಹಂತವಾಗಿ ಬಡ್ತಿ ನೀಡುವ ಮೂಲಕ ತುಂಬಲಾಗುತ್ತಿದೆ. ಆದಾಗ್ಯೂ ತಾಂತ್ರಿಕ ಸಹಾಯಕರು, ಡಾಟಾ ಎಂಟ್ರಿ ಆಪರೇಟರ್ಸ್ ಮತ್ತು ವಾಹನ ಚಾಲಕರುಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಹಾಗೂ ಹೋಂಗಾರ್ಡ್‌ಗಳ ಸೇವೆಯನ್ನೂ ಸಹ ಪಡೆದು ಸಾರ್ವಜನಿಕರ ಕೆಲಸಗಳಲ್ಲಿ ಯಾವುದೇ ವಿಳಂಬವಿಲ್ಲದೇ ವಿಲೇವಾರಿ ಮಾಡಲಾಗುತ್ತಿದೆ. ಮುಂದುವರೆದು, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯಾಪ್ತಿಯಲ್ಲಿ ಬರುವ ಬೀದರ್ ಜಿಲ್ಲೆಯ ಒಟ್ಟು 353 ಹುದ್ದೆಗಳು ಖಾಲಿ ಇರುತ್ತವೆ. ಸಂಸ್ಥೆಯ ಅಧಿಕಾರಿಗಳು ಹಾಗೂ ಮೇಲ್ವಿಚಾರಕ ಸಿಬ್ಬಂದಿಗಳ ನೇಮಕಾತಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಮಾಡಲಾಗುತ್ತಿದ್ದು, 2018ರಿಂದ ಇಲ್ಲಿಯವರೆಗೆ ಅಧಿಕಾರಿ / ಮೇಲ್ವಿಚಾರಕ ಹುದ್ದೆಗಳಿಗೆ ನೇರ ನೇಮಕಾತಿಯನ್ನು ಮಾಡಿಕೊಂಡಿರುವುದಿಲ್ಲ. ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ, ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 03 ಬಿಇಎಂ 2020, ದಿನಾಂಕ: 06-07-2020ರ ಅನುಸಾರ ಮುಂದಿನ ಆದೇಶದವರೆಗೆ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿದೆ. ಮುಂದುವರೆದು, ಈ.ಕ.ರ.ಸಾ.ಸಂಸ್ಥೆಯಲ್ಲಿ ಪ್ರಸ್ತುತ ಖಾಲಿ ಇರುವ ಮತ್ತು 2019-20ನೇ ಸಾಲಿಗೆ ಅವಶ್ಯವಿರುವ ಚಾಲಕ 925 (740 ಸ್ಥಳೀಯ & 185 ಮಿಕ್ಕುಳಿದ) ಮತ್ತು ಚಾಲಕ-ಕಂ-ನಿರ್ವಾಹಕ 694 (555 ಸ್ಥಳೀಯ & 139 ಮಿಕ್ಕುಳಿದ) ಒಟ್ಟು 1619 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಈಗಾಗಲೇ ಜಾಹೀರಾತನ್ನು ಹೊರಡಿಸಲಾಗಿರುತ್ತದೆ. ಅದೇ ರೀತಿ, ಇನ್ನೂ ಒಟ್ಟು 920 ದರ್ಜೆ-3 ಮೇಲ್ವಿಚಾರಕೇತರ ವೃಂದದ ವಿವಿಧ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಗೆ ಕ್ರಮ ಪ್ರಗತಿಯಲ್ಲಿರುವ ಸಂದರ್ಭದಲ್ಲಿಯೇ ದೇಶವ್ಯಾಪಿ ಕೋವಿಡ್-19 ಸಾಂಕ್ರಾಮಿಕ ರೋಗ ವ್ಯಾಪಕವಾಗಿ ಹರಡಿರುವ ಹಿನ್ನೆಲೆಯಲ್ಲಿ, ಆರ್ಥಿಕ ಮಿತವ್ಯಯ ಸಾಧಿಸಲು ಸರ್ಕಾರದ ಆದೇಶ ಸಂಖ್ಯೆ: ಆಇ 03 ಬಿಇಎಂ 2020, ದಿನಾಂಕ: 06-07-2020ರಲ್ಲಿ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು ಮತ್ತು ಬ್ಯಾಕಲಾಗ್ ಹುದ್ದೆಗಳೂ ಸೇರಿದಂತೆ ಹಾಗೂ ಆರ್ಥಿಕ ಇಲಾಖೆಯ ಅನುಮತಿ ಪಡೆದು ನೇಮಕಾತಿಯ ವಿವಿಧ ಹಂತಗಳಲ್ಲಿರುವ ಹುದ್ದೆಗಳ ನೇಮಕಾತಿಯನ್ನು ಸಹ ತಡೆಹಿಡಿಯಲು ಆದೇಶಿಸಲಾಗಿರುತ್ತದೆ.

ಸರ್ಕಾರದಿಂದ ನೇಮಕಾತಿಗೆ ವಿಧಿಸಲಾದ ತಡೆ ಆದೇಶವನ್ನು ತೆರವುಗೊಳಿಸಿದ ತರುವಾಯ ನೇಮಕಾತಿ ಪ್ರಕ್ರಿಯೆಗೆ ಮರುಚಾಲನೆ ನೀಡಲಾಗುವುದು.

ಆ) ಜಿಲ್ಲೆಯಲ್ಲಿ ಸಂಚರಿಸುವ ಬಸ್‌ಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಬೀದರ್ ಜಿಲ್ಲೆಯಲ್ಲಿ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಸೇರಿದಂತೆ ಒಟ್ಟಾರೆ 3665 ಬಸ್ಸುಗಳು ನೋಂದಣಿಯಾಗಿದ್ದು, ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ:

ಕ್ರ.ಸಂ.	ತಾಲ್ಲೂಕು	ಬಸ್‌ಗಳ ಸಂಖ್ಯೆ
1	ಬೀದರ್	2202
2	ಔರದ್	344
3	ಕಮಲನಗರ	0
4	ಬಸವಕಲ್ಯಾಣ	330
5	ಭಾಲ್ಕಿ	779
	ಒಟ್ಟು	**3655**

ಬೀದರ್ ಜಿಲ್ಲೆ ಸಾರಿಗೆ ಕಾರ್ಯಾಚರಣೆಯು ಈ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಗೆ ಒಳಪಡುತ್ತದೆ. ಅದರಂತೆ ಜಿಲ್ಲೆಯಲ್ಲಿರುವ ಸಂಸ್ಥೆಯ 6 ಬಸ್ ಘಟಕಗಳಿಂದ ಪ್ರತಿ ದಿನ 434 ಬಸ್‌ಗಳು ಕಾರ್ಯಚರಣೆಯಾಗುತ್ತಿದ್ದು, ಘಟಕವಾರು ವಿವರ ಈ ಕೆಳಗಿನಂತಿದೆ:

ಕ್ರಸಂ	ಘಟಕ	ಅನುಸೂಚಿ ಸಂಖ್ಯೆ
1	ಬೀದರ ಘಟಕ–1	82
2	ಬೀದರ ಘಟಕ–2	64
3	ಹುಮನಾಬಾದ	85
4	ಬಸವಕಲ್ಯಾಣ	73
5	ಭಾಲ್ಕಿ	71
6	ಔರಾದ	59
	ಒಟ್ಟು	**434**

ಕ.ರಾ.ರ.ಸಾ.ನಿಗಮದ ವತಿಯಿಂದ ಬೆಂಗಳೂರು–ಹೈದರಾಬಾದ್–ಬೀದರ್ ಮಾರ್ಗದಲ್ಲಿ 2 ಬಸ್‌ಗಳನ್ನು ಒಂದು ದುಂಡು ಸುತ್ತುವಳಿ ಕಾರ್ಯಾಚರಿಸಲಾಗುತ್ತಿದೆ.

ವಾ.ಕ.ರ.ಸಾ.ಸಂಸ್ಥೆಯಿಂದ ಬೀದರ್ ಜಿಲ್ಲೆ ಹಾಗೂ ಬೀದರ್ ಮುಖಾಂತರ 10 ಬಸ್ಸುಗಳು ಸಂಚರಿಸುತ್ತಿದ್ದು, ತಾಲೂಕಾವಾರು ವಿವರ ಈ ಕೆಳಗಿನಂತಿದೆ:

ತಾಲೂಕು	ಒಟ್ಟು ಬಸ್ಸುಗಳ ಕಾರ್ಯಾಚರಣೆ
ಬೀದರ್	4
ಹುಮನಾಬಾದ್	4
ಬಸವಕಲ್ಯಾಣ	2
ಒಟ್ಟು	**10**

<table>
<tr>
<td>ಇ)</td>
<td>ಜಿಲ್ಲೆಯ ನೂರಾರು ಗ್ರಾಮದಲ್ಲಿ ಬಸ್ ಸಂಚರಿಸುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ;</td>
<td>ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ 667 ಗ್ರಾಮಗಳ ಪೈಕಿ 661 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಒದಗಿಸಲಾಗಿದೆ. ಉಳಿದ 6 ಗ್ರಾಮಗಳಿಗೆ ಬಸ್ ಸಂಚಾರಕ್ಕೆ ಯೋಗ್ಯ ರಸ್ತೆ ಸಂಪರ್ಕವಿಲ್ಲದ ಕಾರಣ ಬಸ್ ಸೇವೆ ಒದಗಿಸಿರುವುದಿಲ್ಲ.</td>
</tr>
<tr>
<td>ಈ)</td>
<td>ಜಿಲ್ಲೆಯಲ್ಲಿರುವ ಬಸ್‌ಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td>
<td>ಬೀದರ್ ಜಿಲ್ಲೆಯಲ್ಲಿ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಸೇರಿದಂತೆ ಒಟ್ಟಾರೆ 3665 ಬಸ್ಸುಗಳು ನೋಂದಣಿಯಾಗಿದ್ದು, ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ:
<table>
<tr><th>ಕ್ರ.ಸಂ.</th><th>ತಾಲ್ಲೂಕು</th><th>ಬಸ್‌ಗಳ ಸಂಖ್ಯೆ</th></tr>
<tr><td>1</td><td>ಬೀದರ್</td><td>2202</td></tr>
<tr><td>2</td><td>ಔರದ್</td><td>344</td></tr>
<tr><td>3</td><td>ಕಮಲನಗರ</td><td>0</td></tr>
<tr><td>4</td><td>ಬಸವಕಲ್ಯಾಣ</td><td>330</td></tr>
<tr><td>5</td><td>ಭಾಲ್ಕಿ</td><td>779</td></tr>
<tr><td colspan="2">ಒಟ್ಟು</td><td>3655</td></tr>
</table>
ಬೀದರ್ ಜಿಲ್ಲೆ ಸಾರಿಗೆ ಕಾರ್ಯಾಚರಣೆಯು ಈ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಗೆ ಒಳಪಡುತ್ತದೆ. ಅದರಂತೆ ಜಿಲ್ಲೆಯಲ್ಲಿರುವ ಸಂಸ್ಥೆಯ 6 ಬಸ್ ಘಟಕಗಳಿಂದ ಪ್ರತಿ ದಿನ 434 ಬಸ್‌ಗಳು ಕಾರ್ಯಚರಣೆಯಾಗುತ್ತಿದ್ದು, ಘಟಕವಾರು ವಿವರ ಈ ಕೆಳಗಿನಂತಿದೆ:
<table>
<tr><th>ಕ್ರ.ಸಂ</th><th>ಘಟಕ</th><th>ಅನುಸೂಚಿ ಸಂಖ್ಯೆ</th></tr>
<tr><td>1</td><td>ಬೀದರ ಘಟಕ–1</td><td>82</td></tr>
<tr><td>2</td><td>ಬೀದರ ಘಟಕ–2</td><td>64</td></tr>
<tr><td>3</td><td>ಹುಮನಾಬಾದ</td><td>85</td></tr>
<tr><td>4</td><td>ಬಸವಕಲ್ಯಾಣ</td><td>73</td></tr>
<tr><td>5</td><td>ಭಾಲ್ಕಿ</td><td>71</td></tr>
<tr><td>6</td><td>ಔರಾದ</td><td>59</td></tr>
<tr><td colspan="2">ಒಟ್ಟು</td><td>434</td></tr>
</table>
</td>
</tr>
<tr>
<td>ಉ)</td>
<td>ಜಿಲ್ಲೆಯಲ್ಲಿರುವ ಮಿನಿ ಬಸ್ ನಿಲ್ದಾಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) ನಿರ್ಮಾಣಗೊಂಡಿರುವ ಬಸ್ ನಿಲ್ದಾಣಗಳು ಉಪಯೋಗಕ್ಕೆ ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ?</td>
<td>ಜಿಲ್ಲೆಯಲ್ಲಿ 11 ಮಿನಿ ಬಸ್ ನಿಲ್ದಾಣಗಳಿದ್ದು, ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ.ಸಂ.</th><th>ತಾಲ್ಲೂಕು</th><th>ಮಿನಿ ಬಸ್ ನಿಲ್ದಾಣಗಳು</th></tr>
<tr><td>1.</td><td>ಬೀದರ್</td><td>ಮನ್ನಾಯಕಹಳ್ಳಿ</td></tr>
<tr><td>2.</td><td>ಬೀದರ್</td><td>ಬಗದಲ್</td></tr>
<tr><td>3.</td><td>ಔರಾದ</td><td>ಮುಧೋಳ(ಬಿ)</td></tr>
<tr><td>4.</td><td>ಔರಾದ</td><td>ಕಮಲನಗರ</td></tr>
<tr><td>5.</td><td>ಔರಾದ</td><td>ಸಂತಪೂರ</td></tr>
<tr><td>6.</td><td>ಔರಾದ</td><td>ಠಾಣಾಕುಸನೂರ</td></tr>
<tr><td>7.</td><td>ಔರಾದ</td><td>ಚಿಂತಕಿ</td></tr>
<tr><td>8.</td><td>ಬಸವ ಕಲ್ಯಾಣ</td><td>ಹುಲಸೂರ</td></tr>
<tr><td>9.</td><td>ಬಸವ ಕಲ್ಯಾಣ</td><td>ಮುಡಬಿ</td></tr>
<tr><td>10.</td><td>ಹುಮನಾಬಾದ</td><td>ಹುಡಗಿ</td></tr>
<tr><td>11.</td><td>ಹುಮನಾಬಾದ</td><td>ಹಳ್ಳಿಖೇಡ (ಬಿ)</td></tr>
</table>
</td>
</tr>
</table>

		ಸದರಿ ಬಸ್ ನಿಲ್ದಾಣಗಳ ಪೈಕಿ ಬೀದರ್ ಜಿಲ್ಲೆಯ ಕಮಲಾನಗರ ಹಾಗೂ ಹುಲಸೂರು ಬಸ್ ನಿಲ್ದಾಣಗಳು ಸೂಕ್ತ ಉಪಯೋಗವಾಗುತ್ತಿಲ್ಲ. ಕಮಲಾನಗರದಲ್ಲಿ ಮುಖ್ಯರಸ್ತೆ ಬದಿಯಲ್ಲಿ ತಂಗುದಾಣ ನಿರ್ಮಿಸಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಲಾಗಿದೆ. ಹುಲಸೂರಿನಲ್ಲಿ ಪೊಲೀಸ್ ಇಲಾಖೆಯ ನಿವೇಶನದೊಂದಿಗೆ ಈ.ಕ.ರ.ಸಾ.ಸಂಸ್ಥೆಯ ನಿವೇಶನ ಬದಲಾಯಿಸಿಕೊಳ್ಳುವ ಕುರಿತು ಪರಿಶೀಲಿಸಲಾಗುತ್ತಿದೆ.

ಸಂಖ್ಯೆ: ಟಿಡಿ 121 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು